ವರ್ಷ	ತಪಾಸಿಸಿದ ವಾಹನಗಳು	ದಾಖಲಿಸಿದ ಪ್ರಕರಣಗಳು	ವಶಪಡಿಸಿ ಕೊಂಡ ವಾಹನಗಳು	ಸಂಗ್ರಹಿಸಿದ ತೆರಿಗೆ ಮತ್ತು ದಂಡದ ಮೊತ್ತ (₹ ಗಳಲ್ಲಿ)
2012–13	551963	37996	4906	663272935
2013–14	868222	49465	7087	743892100
2014–15 (ಜೂನ್ ವರೆಗೆ)	266366	11549	1753	199068598
ಒಟ್ಟು	**1686551**	**99010**	**13746**	**1606233633**

ಅನುಸೂಚಿತ ಜಾತಿ ಉಪಯೋಜನೆ ಹಾಗೂ ಬುಡಕಟ್ಟು ಉಪಯೋಜನೆ

2779 (3926), ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ರಾಜ್ಯದಲ್ಲಿ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಅಧಿನಿಯಮವನ್ನು ಜಾರಿಗೆ ತಂದಿರುವ ಸರ್ಕಾರ ಪ್ರಸಕ್ತ ಸಾಲಿನಲ್ಲಿ ಎಷ್ಟು ಅನುದಾನ ಬಿಡುಗಡೆ ಮಾಡಿದೆ; (ವಿವರ ಒದಗಿಸುವುದು);

ಆ) ಕಳೆದ ಸಾಲಿನಲ್ಲಿ ಈ ಕಾರ್ಯಕ್ಕೆ ಎಷ್ಟು ಅನುದಾನ ಬಳಸಲಾಗಿತ್ತು; ಹೆಚ್ಚುವರಿ ಮಾಡಿರುವ ಮೊತ್ತದಿಂದ ಯಾರಿಗೆ ಅನುಕೂಲ ಆಗಲಿದೆ;

ಇ) ವಿವಿಧ ಇಲಾಖೆ ಅಡಿ ಪರಿಶಿಷ್ಟ ಪಂಗಡದವರಿಗೆ ನೀಡಲಾಗುತ್ತಿದ್ದ ಸಹಾಯಧನವನ್ನು ಹೆಚ್ಚಿಸಲಾಗಿದೆಯೇ; ಇವರಿಗೆ ಹನಿ ನೀರಾವರಿ ಯೋಜನೆಯಡಿ ಹೆಚ್ಚು ಅನುಕೂಲ ಕಲ್ಪಿಸಲಾಗಿದೆಯೇ; (ವಿವರ ಒದಗಿಸುವುದು);

ಈ) ಹಸು, ಕುರಿ, ಮೇಕೆ ಕೊಳ್ಳುವವರು, ಹಣ್ಣಿನ ವ್ಯಾಪಾರಿಗಳು, ನೇಕಾರರು, ಕೈಗಾರಿಕಾ ಚಟುವಟಿಕೆ ನಡೆಸಲು ಬಯಸುವವರಿಗೂ ಸರ್ಕಾರದಿಂದ ಸಹಾಯಧನ ನೀಡಲಾಗುವುದೇ; ಇದ್ದರೆ ಎಷ್ಟು ಸಹಾಯಧನ ನೀಡಲಾಗುತ್ತದೆ;

ಉ) ಹಿಂದುಳಿದ ವರ್ಗದವರ ಕಲ್ಯಾಣಕ್ಕೆ ಈ ವರ್ಷ ಎಷ್ಟು ಹಣ ಮೀಸಲಿಡಲಾಗಿದೆ; ಇದನ್ನು ಯಾವ ಮಾನದಂಡದ ಮೇಲೆ ಹಂಚಿಕೆ ಮಾಡಲಾಗುವುದು;

ಊ) ಐಎಎಸ್, ಕೆಎಎಸ್, ಬ್ಯಾಂಕಿಂಗ್ ಇತ್ಯಾದಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರ್ವಭಾವಿ ತರಬೇತಿಗಾಗಿ ಎಷ್ಟು ವಿದ್ಯಾರ್ಥಿಗಳಿಗೆ ಇಲಾಖೆ ಆರ್ಥಿಕ ನೆರವು ನೀಡಲು ಸರ್ಕಾರ ನಿರ್ಧರಿಸಿದೆಯೇ; ಇದಕ್ಕಾಗಿ ಎಷ್ಟು ಮೊತ್ತ ಮೀಸಲಿಡಲಾಗಿದೆ?

ಶ್ರೀ ಹೆಚ್.ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ 2013, ದಿನಾಂಕ:20.03.2014 ರಿಂದ ಜಾರಿಗೆ ಬಂದಿರುತ್ತದೆ.

2014–15ನೇ ಸಾಲಿಗೆ SCSP ಉಪ ಯೋಜನೆಯಡಿ ₹ 11518.99 ಕೋಟಿ ಮತ್ತು TSP ಉಪ ಯೋಜನೆಯಡಿ ₹ 4315.18 ಕೋಟಿಗಳನ್ನು ಒದಗಿಸಿದ್ದು, ಈ ಎರಡು ಉಪ ಯೋಜನೆಗಳಡಿ ವಿವಿಧ ಅಭಿವೃದ್ಧಿ ಇಲಾಖೆಗಳು ಸಲ್ಲಿಸಿದ ಕ್ರಿಯಾ ಯೋಜನೆಗಳನ್ನು ನೋಡೆಲ್ ಏಜೆನ್ಸಿ ಸಮಿತಿ ಸಭೆಯಲ್ಲಿ ಪರಿಶೀಲಿಸಿ, ರಾಜ್ಯ ಅಭಿವೃದ್ಧಿ ಪರಿಷತ್ತಿನ ಅನುಮೋದನೆ ಪಡೆದ ನಂತರ ಸಂಬಂಧಪಟ್ಟ ಇಲಾಖೆಗಳು ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುತ್ತವೆ.

ಆ) 2013–14ನೇ ಸಾಲಿನಲ್ಲಿ SCSP ಮತ್ತು TSP ಉಪ ಯೋಜನೆಯಡಿ ಬಳಸಲಾದ ಅನುದಾನದ ವಿವರಗಳು ಈ ಕೆಳಕಂಡಂತಿವೆ.

(₹ ಲಕ್ಷಗಳಲ್ಲಿ)

ಉಪ ಯೋಜನೆ	ನಿಗದಿಪಡಿಸಿದ ಅನುದಾನ	ಬಿಡುಗಡೆ	ಖರ್ಚು
SCSP	613556.64	541185.44	525331.17
TSP	248073.53	203794.60	195028.08

ಮೇಲ್ಕಂಡ ಅನುದಾನದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಅನುಕೂಲ ಆಗಲಿದೆ.

ಇ) ಹೌದು.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ತೋಟಗಾರಿಕೆ ಇಲಾಖೆಗಳಿಂದ ಅನುಷ್ಠಾನ ಮಾಡುತ್ತಿರುವ ಹನಿ ನೀರಾವರಿ ಕಾರ್ಯಕ್ರಮದಡಿ ಈ ಜನಾಂಗದವರಿಗೆ ಹೆಚ್ಚು ಅನುಕೂಲ ಕಲ್ಪಿಸಲಾಗಿದೆ. ಈ ಕಾರ್ಯಕ್ರಮದಡಿ ಶೇ.50 ರಿಂದ ಶೇ.90 ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ.

ಈ) ಹೌದು.

ಪರಿಶಿಷ್ಟ ಜಾತಿ ಜನಾಂಗದವರಿಗೆ ಹಸು, ಕುರಿ, ಮೇಕೆ ಕೊಳ್ಳುವವರಿಗೆ ಪಶು ಸಂಗೋಪನೆ ಇಲಾಖೆಯಿಂದ ಘಟಕ ವೆಚ್ಚದಲ್ಲಿ ಶೇ.60 ರಷ್ಟು ಸಹಾಯಧನ ಮತ್ತು ನೇಕಾರರಿಗೆ ವಿವಿಧ ಯೋಜನೆಗಳಡಿ ಕೈಮಗ್ಗ ಮತ್ತು ಜವಳಿ ಇಲಾಖೆಯಿಂ ಶೇ.90 ರಷ್ಟು ಸಹಾಯಧನ ನೀಡಲಾಗುತ್ತಿದೆ.

ಉ) 2014–15ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಈ ಕೆಳಕಂಡಂತೆ ಅನುದಾನ ಮೀಸಲಿಡಲಾಗಿದೆ.

(₹ ಲಕ್ಷಗಳಲ್ಲಿ)

ಕ್ರ.ಸಂ.	ವಲಯ	ಯೋಜನೆ	ಯೋಜನೇತರ
1	ರಾಜ್ಯ ವಲಯ	65725.06	611.31
2	ಜಿಲ್ಲಾ ವಲಯ	18663.09	42690.35

ಮುಂದುವರಿದ ಮತ್ತು ಹೊಸ ಕಾರ್ಯಕ್ರಮಗಳನ್ನು ಆಧರಿಸಿ ಅನುದಾನವನ್ನು ಹಂಚಿಕೆ ಮಾಡಲಾಗುವುದು.

ಊ) ಪ್ರಸಕ್ತ ಸಾಲಿನಲ್ಲಿ ಐ.ಎ.ಎಸ್., ಕೆ.ಎ.ಎಸ್., ಬ್ಯಾಂಕಿಂಗ್ ಇತ್ಯಾದಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರ್ವಭಾವಿ ತರಬೇತಿಗಾಗಿ ಸಮಾಜ ಕಲ್ಯಾಣ ಇಲಾಖೆಯು ಸುಮಾರು 500 ಅಭ್ಯರ್ಥಿಗಳನ್ನು ನಿಯೋಜಿಸಲು ನಿರ್ಧರಿಸಲಾಗಿದೆ. ಇದಕ್ಕಾಗಿ ಅಂದಾಜು ₹ 500.00 ಲಕ್ಷಗಳನ್ನು ಮೀಸಲಿಡಲಾಗಿದೆ ಹಾಗೆಯೇ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2,000 ಅಭ್ಯರ್ಥಿಗಳನ್ನು ನಿಯೋಜಿಸಲು ನಿರ್ಧರಿಸಿದ್ದು, ಇದಕ್ಕಾಗಿ ಅಂದಾಜು ₹ 295.00 ಲಕ್ಷಗಳನ್ನು ಮೀಸಲಿಡಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಇಂಪ್ಲಿಮೆಂಟೇಶನ್ ಕಾಯ್ದೆ ಜಾರಿಗೆ ತರುವುದು

2780 (3927), ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಇಂಪ್ಲಿಮೆಂಟ್ ಕಾಯ್ದೆ ಜಾರಿಗೆ ತರುವ ಕಾರ್ಯ ಯಾವ ಹಂತದಲ್ಲಿದೆ; ಈ ಕುರಿತು ಈಗಾಗಲೇ ಸಾಕಷ್ಟು ಸಭೆಗಳು ನಡೆದಿರುವುದು ನಿಜವೆ;

ಆ) ಕಾಯ್ದೆ ಜಾರಿಗೆ ಬಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಿಗುವ ಅನುಕೂಲಗಳು ಯಾವುವು; ಈ ಕಾಯ್ದೆ ಹೊಸದಾಗಿ ಜಾರಿಗೆ ತರಲು ಸರ್ಕಾರ ಕ್ರಮ ಕೈಗೊಳ್ಳುವುದೆ (ಇರುವ ಕಾಯ್ದೆಗೆ ಬಲ ತುಂಬಲಾಗುತ್ತಿದೆಯೇ ವಿವರಿಸಿ);

ಇ) ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ. ಫಲಿತಾಂಶದ ಪ್ರಗತಿ ಕಂಡಿರುವುದು ನಿಜವೇ